RNU AIR DHARWAD

MAY 29, 2025

# AKASHAVANI - DHARWAD

## PRADESH SAMACHARA (KANNADA) 07.05 A.M.

<><><>

**ಆಕಾಶವಾಣಿ**

**ಪ್ರದೇಶ ಸಮಾಚಾರ**

<><><>

- **ರಾಜ್ಯದ ಮಳೆ ಮತ್ತು ಪ್ರವಾಹ ಪರಿಸ್ಥಿತಿ** ಬಗ್ಗೆ, ನಾಳೆ ಹಾಗೂ ನಾಡಿದ್ದು, ಮುಖ್ಯಮಂತ್ರಿ ಅವಲೋಕನ.
- **ಇಂದಿನಿಂದ, ಜೂನ್ 12ರ ವರೆಗೆ,** 'ವಿಕಸಿತ ಕೃಷಿ ಸಂಕಲ್ಪ, ರಾಷ್ಟ್ರೀಯ ಅಭಿಯಾನ.'
- **ಶಿವಮೊಗ್ಗ ಎ.ಪಿ.ಎಂ.ಸಿ.,** ರಾಜ್ಯದಲ್ಲೇ ಎರಡನೇ ಅತಿ ಹೆಚ್ಚು ವಹಿವಾಟು ನಡೆಸುವ ಮಾರುಕಟ್ಟೆ.
- **ಉತ್ತರಕನ್ನಡ ಹಾಗೂ ಕೊಡಗು ಹೊರತು ಪಡಿಸಿ,** ರಾಜ್ಯಾದ್ಯಂತ ಶಾಲೆಗಳು ಇಂದು, ಪುನರಾರಂಭ.

<><><>

**ರಾಜ್ಯಾದ್ಯಂತ, ಮಳೆ ಹಾಗೂ ಪ್ರವಾಹ ಸಂಬಂಧಿ** ಸ್ಥಿತಿಗತಿ ಬಗ್ಗೆ, ಸಮಗ್ರ ಅವಲೋಕನಕ್ಕಾಗಿ, ನಾಳೆ ಮತ್ತು ನಾಡಿದ್ದು, ಜಿಲ್ಲಾಧಿಕಾರಿಗಳು, ಜಿಲ್ಲಾ ಪಂಚಾಯ್ತಿ ಸಿ.ಇ.ಓ.ಗಳು ಹಾಗೂ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳ ಸಭೆ ಕರೆಯುವಂತೆ, ಮುಖ್ಯಮಂತ್ರಿ ಸಿದ್ದರಾಮಯ್ಯ, ರಾಜ್ಯ ಮುಖ್ಯ ಕಾರ್ಯದರ್ಶಿ ಶಾಲಿನಿ ರಜನೀಶ ಅವರಿಗೆ, ಸೂಚಿಸಿದ್ದಾರೆ. ಬೆಂಗಳೂರಿನಲ್ಲಿ ಅಧಿಕಾರಿಗಳ ಸಭೆ ನಡೆಸಿದ ಮುಖ್ಯಮಂತ್ರಿ, ಮಳೆ ಅನಾಹುತ ಹಾಗೂ ಪ್ರವಾಹ ಪೀಡಿತ ಪ್ರದೇಶಗಳಲ್ಲಿ ಕೈಗೊಳ್ಳಲಾದ, ಮುಂಜಾಗ್ರತಾ ಕ್ರಮಗಳ ಮಾಹಿತಿ ಪಡೆದರು. ಕಟ್ಟೆಚ್ಚರ ಮತ್ತು ತೀವ್ರ ನಿಗಾ ವಹಿಸಿ, ತಕ್ಷಣ ಪರಿಹಾರ ಕಾರ್ಯಗಳನ್ನು ಸಮರೋಪಾದಿಯಲ್ಲಿ ನಿರ್ವಹಿಸುವಂತೆ, ಆದೇಶಿಸಿದರು. ರಾಜ್ಯದ ಪ್ರವಾಹ ಪೀಡಿತ ಪ್ರದೇಶಗಳಿಗೆ ತೆರಳಿ, ಪರಿಹಾರ ಕಾರ್ಯದ ಉಸ್ತುವಾರಿ ನೋಡಿಕೊಳ್ಳುವಂತೆ, ಆಯಾ ಜಿಲ್ಲಾ ಉಸ್ತುವಾರಿ ಸಚಿವರು ಹಾಗೂ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳಿಗೆ, ಮುಖ್ಯಮಂತ್ರಿ ನಿರ್ದೇಶಿಸಿದರು.

<><><>

**ರಾಜ್ಯದಲ್ಲಿ 170 ತಾಲೂಕುಗಳನ್ನು** ಪ್ರವಾಹ ಅಥವಾ ಭೂ ಕುಸಿತಕ್ಕೆ ಗುರಿಯಾಗುವ ತಾಲೂಕುಗಳೆಂದು ಗುರುತಿಸಲಾಗಿದ್ದು, ಮುಂಜಾಗ್ರತೆಯಾಗಿ 2 ಸಾವಿರದ 296 ಕಾಳಜಿ ಕೇಂದ್ರ, ಆಶ್ರಯ ತಾಣಗಳನ್ನು ಸಿದ್ಧಪಡಿಸಲಾಗಿದೆ.

<><><>

**ರಾಜ್ಯದಲ್ಲಿ ಮಳೆ ಹಾನಿ ಮತ್ತು ಭೂ ಕುಸಿತದಿಂದ** ಹಾನಿಗೊಳಗಾದ ಪ್ರದೇಶಗಳಲ್ಲಿ, ತುರ್ತು ಪರಿಹಾರ ಮತ್ತು ಶಾಶ್ವತ ಕ್ರಮ ಕೈಗೊಳ್ಳುವಂತೆ, ವಿಧಾನಸಭೆ ವಿಪಕ್ಷ ನಾಯಕ ಆರ್.ಅಶೋಕ, ಮುಖ್ಯಮಂತ್ರಿಯವರಿಗೆ ಪತ್ರ ಬರೆದಿದ್ದಾರೆ. ಕಳೆದ 50 ವರ್ಷಗಳ ಬಳಿಕ, ಪ್ರಸಕ್ತ ಸಾಲಿನಲ್ಲಿ ಮುಂಗಾರು ಮಳೆ, 15 ದಿನ ಮುಂಚಿತವಾಗಿ ರಾಜ್ಯ ಪ್ರವೇಶಿಸಿದೆ. ಬಹುತೇಕ ಜಿಲ್ಲೆಗಳಲ್ಲಿ ಭಾರಿ ಮಳೆಯಿಂದ ಆಸ್ತಿ, ಬೆಳೆ ನಷ್ಟವಾಗಿದ್ದು, ಜನ ಜೀವನ ಅಸ್ತವ್ಯಸ್ತಗೊಂಡಿದೆ. ಪ್ರವಾಹ ನಿರ್ವಹಣೆಯಲ್ಲಿ ಅನುದಾನದ ಕೊರತೆ ಎದ್ದು ಕಾಣುತ್ತಿದೆ. ದೀರ್ಘಾವಧಿ ಪುನರ್‌ವಸತಿ ಕ್ರಮಗಳ ಜೊತೆಗೆ, ಭೂಕುಸಿತ ಪ್ರದೇಶಗಳ, ವೈಜ್ಞಾನಿಕ ಅಧ್ಯಯನ, ತಜ್ಞರಿಂದ ಕೈಗೊಳ್ಳುವುದು ಅಗತ್ಯ ಎಂದು, ಅವರು ಒತ್ತಾಯಿಸಿದ್ದಾರೆ.

<><><>

**ಧಾರವಾಡ ಜಿಲ್ಲೆ, ಹುಬ್ಬಳ್ಳಿ ಹಾಗೂ** ನವಲಗುಂದ ತಾಲೂಕು ವ್ಯಾಪ್ತಿಯ, ತುಪ್ಪರಿಹಳ್ಳ ಮತ್ತು ಬೆಣ್ಣಿ ಹಳ್ಳದ ಪ್ರವಾಹ ನಿಯಂತ್ರಣ ಹಾಗೂ ನೀರಿನ ಸದ್ಬಳಕೆ ಕುರಿತು, ನೀರಾವರಿ ತಜ್ಞ ಜಿ.ಎಸ್.ಪರಮಶಿವಯ್ಯ, 2012ರಲ್ಲಿ ನೀಡಿದ, ಅಧ್ಯಯನ ವರದಿ ಆಧರಿಸಿ, ಯೋಜನೆ ರೂಪಿಸಲಾಗಿದೆ ಎಂದು, ಜಿಲ್ಲಾ ಉಸ್ತುವಾರಿ ಸಚಿವ ಸಂತೋಷ ಲಾಡ ತಿಳಿಸಿದ್ದಾರೆ.

**ಧಾರವಾಡ ಜಿಲ್ಲೆಯ,** ಹುಬ್ಬಳ್ಳಿ ತಾಲೂಕಿನ ಶಿರಗುಪ್ಪಿ ಹಾಗೂ ಇಂಗಳಹಳ್ಳಿ ಗ್ರಾಮಗಳಲ್ಲಿ, ಜನಪ್ರತಿನಿಧಿಗಳು ಹಾಗೂ ಜಿಲ್ಲಾಡಳಿತದ ಹಿರಿಯ ಅಧಿಕಾರಿಗಳೊಂದಿಗೆ ಅವರು, ನೆರೆ ನಿರ್ವಹಣೆ ಪೂರ್ವ ಸಿದ್ಧತೆ ಪರಿಶೀಲಿಸಿದರು.

ಬೆಣ್ಣಿ ಹಳ್ಳ ಹಾಗೂ ತುಪ್ಪರಿ ಹಳ್ಳಗಳ ಪ್ರವಾಹ ನಿಯಂತ್ರಿಸಲು, 200 ಕೋಟಿ ರೂಪಾಯಿ ಟೆಂಡರ್ ಪ್ರಕ್ರಿಯೆ ಪೂರ್ಣಗೊಂಡ ಬಳಿಕ, ಹೂಳೆತ್ತುವ ಕಾಮಗಾರಿ, ಆರಂಭಿಸಲಾಗುವುದು ಎಂದರು.

<><><>

**ಪಕ್ಕದ ಮಹಾರಾಷ್ಟ್ರ ರಾಜ್ಯದಲ್ಲಿ** ಮಳೆ ಹೆಚ್ಚಿದ್ದರಿಂದ, ಯಾದಗಿರಿ ಜಿಲ್ಲೆಯ, ಭೀಮಾ ನದಿ ವ್ಯಾಪ್ತಿಯ 35 ಗ್ರಾಮಗಳು ಹಾಗೂ ಕೃಷ್ಣ ನದಿ ಜಲಾನಯನ ಪ್ರದೇಶದ, 45 ಗ್ರಾಮಗಳು ಪ್ರವಾಹದಿಂದ ಬಾಧಿತವಾಗುವ ಸಾಧ್ಯತೆ ಇದೆ. ಭೀಮಾ ಹಾಗೂ ಕೃಷ್ಣ ನದಿಗಳ ವ್ಯಾಪ್ತಿಯ, ಸೊನ್ನ ಹಾಗೂ ಸನ್ನತಿ ಬ್ಯಾರೇಜ್‌ನ 80 ಗ್ರಾಮಗಳಲ್ಲಿ ಮುಂಜಾಗ್ರತೆ ವಹಿಸುವಂತೆ, ಯಾದಗಿರಿ ಜಿಲ್ಲಾಧಿಕಾರಿ ಬಿ.ಸುಶೀಲಾ ಜನರಲ್ಲಿ ಮನವಿ ಮಾಡಿದ್ದಾರೆ.

<><><>

**ಯಾದಗಿರಿ ಹೊರವಲಯದ** ಭೀಮಾ ನದಿ, ಮೈದುಂಬಿ ಹರಿಯುತ್ತಿದ್ದು, 5 ಸಾವಿರ ಕ್ಯೂಸೆಕ್ ನೀರನ್ನು, ನದಿಗೆ ಹರಿ ಬಿಡಲಾಗುತ್ತಿದೆ. ಕಂಗಳೇಶ್ವರ ದೇವಸ್ಥಾನದ ವರೆಗೆ ನೀರು ಹರಿದು ಬಂದಿದೆ.

<><><>

**ಕಲಬುರಗಿ ಜಿಲ್ಲಾ ಪಂಚಾಯ್ತಿ** ಸಿ.ಇ.ಓ. ಭಂವರ್‌ಸಿಂಗ್ ಮೀನಾ, ಅಫಜಲಪೂರ ತಾಲೂಕಿನ ದೇವಲ ಗಾಣಗಾಪುರಕ್ಕೆ ಭೇಟಿ ನೀಡಿ, ಪರಿಶೀಲಿಸಿದರು.

<><><>

**ಕೊಡಗು ಜಿಲ್ಲೆಯಲ್ಲಿ,** ವ್ಯಾಪಕ ಮಳೆ ಮುಂದುವರೆದ ಹಿನ್ನೆಲೆ, ಎನ್.ಡಿ.ಆರ್.ಎಫ್ ತಂಡ ಸನ್ನದ್ಧವಾಗಿದೆ. ನಾಳೆಯ ವರೆಗೆ, ಅಂಗನವಾಡಿ, ಪ್ರಾಥಮಿಕ ಹಾಗೂ ಪ್ರೌಢ ಶಾಲೆಗಳಿಗೆ ರಜೆ ಘೋಷಿಸಿ, ಶಾಲೆಗಳ ಪುನರಾರಂಭವನ್ನು, ಮುಂದೂಡಿದ್ದಾಗಿ, ಜಿಲ್ಲಾಧಿಕಾರಿ ವೆಂಕಟರಾಜಾ ತಿಳಿಸಿದ್ದಾರೆ.

<><><>

**ಉತ್ತರಕನ್ನಡ ಜಿಲ್ಲೆಗೆ ಇಂದು,** ರೆಡ್ ಅಲರ್ಟ್ ಪ್ರಕಟಿಸಲಾಗಿದೆ. ಅಂಗನವಾಡಿ ಹಾಗೂ ಶಾಲೆಗಳಿಗೆ ಇಂದು ರಜೆ ಘೋಷಿಸಲಾಗಿದೆ.

<><><>

**ಕೇಂದ್ರ ಕೃಷಿ ಮಂತ್ರಾಲಯ, ಧಾರವಾಡ ಸೇರಿದಂತೆ,** ದೇಶದ 731 ಗಾಂಧಿ ಕೃಷಿ ವಿಜ್ಞಾನ ಕೇಂದ್ರಗಳ ಮೂಲಕ, 700 ಜಿಲ್ಲೆಗಳಲ್ಲಿ, ಇಂದಿನಿಂದ ಜೂನ್ 12ರ ವರೆಗೆ, 15 ದಿನಗಳ ಕಾಲ, 'ವಿಕಸಿತ ಕೃಷಿ ಸಂಕಲ್ಪ ರಾಷ್ಟ್ರೀಯ ಅಭಿಯಾನ' ಆರಂಭಿಸಲಿದೆ. ಸಾವಿರದ 500 ರಿಂದ ಎರಡು ಸಾವಿರ ತಂಡಗಳ ಮೂಲಕ, ದೇಶದ 700 ಜಿಲ್ಲೆಗಳ, ಅಂದಾಜು 2 ಕೋಟಿ ರೈತರೊಂದಿಗೆ, ತಜ್ಞರು ನೇರ ಸಂವಾದ ನಡೆಸಲಿದ್ದಾರೆ.

<><><>

**ಭಾರತೀಯ ಕೃಷಿ ಅನುಸಂಧಾನ** ಪರಿಷತ್ ಸಂಚಾಲಿತ, ಧಾರವಾಡದ ಕೃಷಿ ವಿಜ್ಞಾನ ಕೇಂದ್ರ ಹಾಗೂ ಧಾರವಾಡ ಕೃಷಿ ವಿಶ್ವವಿದ್ಯಾಲಯದ ಸಹಯೋಗದಲ್ಲಿ, ಇಂದು, ಧಾರವಾಡ ತಾಲೂಕಿನ ಕುರುಬಗಟ್ಟಿ ಗ್ರಾಮದಲ್ಲಿ, ಅಭಿಯಾನಕ್ಕೆ ಚಾಲನೆ ನೀಡಲಾಗುತ್ತಿದೆ. ಜಿಲ್ಲೆಯ ವಿವಿಧ ತಾಲೂಕುಗಳ 100 ಗ್ರಾಮಗಳಲ್ಲಿ ವಿಕಸಿತ ಕೃಷಿ ಸಂಕಲ್ಪ ರಾಷ್ಟ್ರೀಯ ಅಭಿಯಾನ ಆಯೋಜಿಸಲಾಗಿದೆ.

<><><>

**ಬಳ್ಳಾರಿ ಹಾಗೂ ವಿಜಯನಗರ ಜಿಲ್ಲೆಯ,** ಕೃಷಿ ವಿಜ್ಞಾನ ಕೇಂದ್ರದ ಮುಖ್ಯಸ್ಥ ಪಾಲಯ್ಯ, ಪ್ರದೇಶ ಸಮಾಚಾರಕ್ಕಾಗಿ ಮಾಹಿತಿ ನೀಡಿದ್ದಾರೆ.

<><><>

**ಶಿವಮೊಗ್ಗದ ಕೃಷಿ ಉತ್ಪನ್ನಗಳ** ಮಾರಾಟ ಕೇಂದ್ರ – ಎ.ಪಿ.ಎಂ.ಸಿ.ಯಲ್ಲಿ, 2 ಸಾವಿರದ 4 ನೂರಾ 75 ಕೋಟಿ ರೂಪಾಯಿ ವಹಿವಾಟು ನಡೆಯುತ್ತಿದೆ; 250 ಕೋಟಿ ರೂಪಾಯಿ ಸರಕು ಮತ್ತು ಸೇವಾ ತೆರಿಗೆ, ಪಾವತಿಸಲಾಗುತ್ತಿದೆ ಎಂದು, ಜಿಲ್ಲಾ ಉಸ್ತುವಾರಿ ಸಚಿವ ಮಧು ಬಂಗಾರಪ್ಪ ತಿಳಿಸಿದ್ದಾರೆ. ಕೃಷಿ ಮಾರಾಟ ಇಲಾಖೆ, ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ, ಶಿವಮೊಗ್ಗ ಎ.ಪಿ.ಎಂ.ಸಿ. ಪ್ರಾಂಗಣದಲ್ಲಿ ನೂತನವಾಗಿ ನಿರ್ಮಿಸಿದ, ವಾಣಿಜ್ಯ ಸಂಕೀರ್ಣವನ್ನು ಉದ್ಘಾಟಿಸಿ, ಅವರು ಮಾತನಾಡಿದರು. ಶಿವಮೊಗ್ಗ ಎ.ಪಿ.ಎಂ.ಸಿ. ರಾಜ್ಯದಲ್ಲೇ ಎರಡನೇ ಅತಿ ಹೆಚ್ಚು ವಹಿವಾಟು ನಡೆಸುವ ಕೇಂದ್ರವಾಗಿದೆ. ಈ ಭಾಗದ ಅಡಕೆ, ಶುಂಠಿ, ಅರಿಷಿಣ, ಅನಾನಸ್ ಹಾಗೂ ಇತರೆ ಬೆಳೆಗಳಿಗೆ ಬೇಸಿಗೆಯಲ್ಲೂ ನೀರಿನ ಅವಶ್ಯಕತೆ ಇದೆ. ರೈತರಿಗೆ ಉಚಿತವಾಗಿ ವಿದ್ಯುತ್ ಪೂರೈಸಲು, 21 ಸಾವಿರ ಕೋಟಿ ರೂಪಾಯಿ ಹಣವನ್ನು, ರೈತರ ಪರವಾಗಿ ರಾಜ್ಯ ಸರ್ಕಾರ ಪಾವತಿಸುತ್ತಿದೆ ಎಂದು ಸಚಿವ ಮಧು ಬಂಗಾರಪ್ಪ ನುಡಿದರು.

<><><>

**ಶಾಲಾ ಶಿಕ್ಷಣ ಹಾಗೂ ಸಾಕ್ಷರತಾ ಇಲಾಖೆ,** ಇಂದು, ರಾಜ್ಯಾದ್ಯಂತ, 2025–26ನೇ ಶೈಕ್ಷಣಿಕ ವರ್ಷದ, ಶಾಲಾ ಪ್ರಾರಂಭೋತ್ಸವ, ರಾಜ್ಯಾದ್ಯಂತ ಆಯೋಜಿಸಿದೆ. ಇಂದಿನಿಂದ ಶಾಲೆಗಳು ಪುನರಾರಂಭಗೊಳ್ಳಲಿವೆ. ಬೆಂಗಳೂರು ದಕ್ಷಿಣ ವಲಯದ, ಆಡುಗೋಡಿಯ, ಕರ್ನಾಟಕ ಪಬ್ಲಿಕ್ ಶಾಲೆಯಲ್ಲಿ, ಇಂದು ಬೆಳಗ್ಗೆ 11 ಗಂಟೆಗೆ, ಮುಖ್ಯಮಂತ್ರಿ ಸಿದ್ದರಾಮಯ್ಯ, ಶಾಲಾ ಪ್ರಾರಂಭೋತ್ಸವಕ್ಕೆ ಚಾಲನೆ ನೀಡಲಿದ್ದಾರೆ. ಶಾಲಾ ಶಿಕ್ಷಣ ಖಾತೆ ಸಚಿವ ಮಧು ಬಂಗಾರಪ್ಪ ಸೇರಿದಂತೆ, ಗಣ್ಯರು ಪಾಲ್ಗೊಳ್ಳಲಿದ್ದಾರೆ.

<><><>

**ರಾಜ್ಯದ ಎಲ್ಲ ವಿಶ್ರಾಂತ ಯೋಧರಿಗೆ ನೆರವಾಗಲು,** ಪ್ರತ್ಯೇಕ ನಿಗಮ ಸ್ಥಾಪಿಸಲು, ಸಚಿವ ಸಂಪುಟ ಸದ್ಯದಲ್ಲೇ ನಿರ್ಧರಿಸಲಿದೆ ಎಂದು, ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ ತಿಳಿಸಿದ್ದಾರೆ. ಬೆಂಗಳೂರಿನ ಟೌನ್ ಹಾಲ್ ನಲ್ಲಿ, ಜೈ ಹಿಂದ್ ಸಭಾ ಕಾರ್ಯಕ್ರಮದಲ್ಲಿ, ಹಿರಿಯ ಸೇನಾಧಿಕಾರಿಗಳು, ವಿಶ್ರಾಂತ ಯೋಧರು, ಹುತಾತ್ಮ ಸೈನಿಕರ ಕುಟುಂಬ ಸದಸ್ಯರನ್ನು ಸನ್ಮಾನಿಸಿ, ಮಾತನಾಡಿದರು.

<><><>

**‘ಇ ಕಾಮರ್ಸ್’ ವೇದಿಕೆಗಳಲ್ಲಿ,** 13 ಮಾದರಿ ಡಾರ್ಕ್ ಪ್ಯಾಟರ್ನ್‌ಗಳನ್ನು ಗುರುತಿಸಿದ್ದು, ವಂಚನೆ ನಿಯಂತ್ರಣಕ್ಕಾಗಿ, ಮೂರು ವಿಧದ ಜಾಗ್ರತಿ ಅಪ್ಲಿಕೇ ’ನ್‌ಗಳನ್ನು ಸಿದ್ಧಪಡಿಸಲಾಗಿದೆ ಎಂದು, ಕೇಂದ್ರ ಗ್ರಾಹಕ ವ್ಯವಹಾರಗಳ ಖಾತೆ ಸಚಿವ ಪ್ರಲ್ಹಾದ ಜೋಶಿ, ಹೊಸ ದಿಲ್ಲಿಯಲ್ಲಿ ತಿಳಿಸಿದ್ದಾರೆ. ಭುವನೇಶ್ವರದ, ಭಾರತೀಯ ಮಾಹಿತಿ ತಂತ್ರಜ್ಞಾನ ಸಂಸ್ಥೆ ಸಹಯೋಗದಲ್ಲಿ, ‘ಜಾಗೃತಿ ಅಪ್ಲಿಕೇಶನ್’, ‘ಜಾಗೋ ಗ್ರಾಹಕ್ ಜಾಗೋ’ ಮತ್ತು ‘ಜಾಗೃತಿ ಡ್ಯಾಶ್‌ಬೋರ್ಡ್’ ಆಪ್ ಅನ್ನು, ಅಭಿವೃದ್ಧಿಪಡಿಸಲು ಕ್ರಮ ಕೈಗೊಳ್ಳಲಾಗಿದೆ ಎಂದು, ಹೇಳಿದರು.

<><><>

**ಸ್ವಾತಂತ್ರ ಹೋರಾಟಗಾರ,** ವಿನಾಯಕ ದಾಮೋದರ ಸಾವರ್ಕರ ಅವರ ಜಯಂತಿ ಹಿನ್ನೆಲೆ, ಪ್ರಧಾನಮಂತ್ರಿ ನರೇಂದ್ರ ಮೋದಿ, ಗೌರವ ನಮನ ಸಲ್ಲಿಸಿದ್ದಾರೆ.

<><><>

**ಕೇಂದ್ರೀಯ ನೇರ ತೆರಿಗೆ ಮಂಡಳಿ –** ಸಿ.ಬಿ.ಡಿ.ಟಿ., ಆದಾಯ ತೆರಿಗೆ ರಿಟರ್ನ್ಸ್ ಸಲ್ಲಿಸುವ ಕೊನೆಯ ದಿನಾಂಕವನ್ನು, ಜುಲೈ 31 ರಿಂದ ಸೆಪ್ಟೆಂಬರ್ 15ರ ವರೆಗೆ, ವಿಸ್ತರಿಸಿದೆ.

<><><>

**ನೀರು ನಾಯಿ,** ಜಲಚರ ಪರಿಸರ ವ್ಯವಸ್ಥೆಯ ರಾಯಭಾರಿಯಾಗಿದ್ದು, ವಿಶ್ವ ನೀರುನಾಯಿ ದಿನವನ್ನು ಅರಣ್ಯ ಇಲಾಖೆ ಆಚರಿಸಿತು.

<><><>

**ಮಂಡ್ಯ ಜಿಲ್ಲೆ, ಕೊಕ್ಕರೆ ಬೆಳ್ಳೂರಿನಲ್ಲಿ** ನಿರೀಕ್ಷಿತ ಪ್ರಮಾಣದಲ್ಲಿ ಈ ಬಾರಿ, ವಲಸೆ ಹಕ್ಕಿಗಳು ಆಗಮಿಸದಿರುವುದು, ಕಳವಳ ಮೂಡಿಸಿದೆ ಎಂದು, ಹೆಜ್ಜಾರ್ಲೆ ಬಳಗದ ಬಿ. ಲಿಂಗೇಗೌಡರು, ಆತಂಕ ವ್ಯಕ್ತ ಪಡಿಸಿದ್ದಾರೆ.

<><><>

- **ರಾಜ್ಯದ ಮಳೆ ಮತ್ತು ಪ್ರವಾಹ ಪರಿಸ್ಥಿತಿ** ಬಗ್ಗೆ, ನಾಳೆ ಹಾಗೂ ನಾಡಿದ್ದು, ಮುಖ್ಯಮಂತ್ರಿ ಅವಲೋಕನ.
- **ಇಂದಿನಿಂದ, ಜೂನ್ 12ರ ವರೆಗೆ,** ‘ವಿಕಸಿತ ಕೃಷಿ ಸಂಕಲ್ಪ, ರಾಷ್ಟ್ರೀಯ ಅಭಿಯಾನ.’
- **ಶಿವಮೊಗ್ಗ ಎ.ಪಿ.ಎಂ.ಸಿ.,** ರಾಜ್ಯದಲ್ಲೇ ಎರಡನೇ ಅತಿ ಹೆಚ್ಚು ವಹಿವಾಟು ನಡೆಸುವ ಮಾರುಕಟ್ಟೆ.
- **ಉತ್ತರಕನ್ನಡ ಹಾಗೂ ಕೊಡಗು ಹೊರತು ಪಡಿಸಿ,** ರಾಜ್ಯಾದ್ಯಂತ ಶಾಲೆಗಳು ಇಂದು, ಪುನರಾರಂಭ.

<><><>